ನೋಡಮ್ಮ ನೀನು ಈಗ ನಮ್ಮ ಲಾಯರ್ ಏನು ಹೇಳಿಕೊಡ್ತಾರೋ ಅದನ್ನೇ ಜಡ್ಜ್ ಮುಂದೆ ಹೇಳಬೇಕು ಅಂತ ಮಗಳು ಶೋಭಾ ಶಾರದಮ್ಮನಿಗೆ ಹೇಳಿದಾಗ ಅವರಿಗೆ ಈ ನಲವತ್ತು ವರ್ಷದಲ್ಲಿ ಯಾವತ್ತೂ ಗಂಡನಿಗೆ ಎದರುಮಾತಾಡದವಳು, ಬದಲುಹೇಳದವಳು ಇವತ್ತು ಗಂಡನಿಗೆ ಎದುರಾಗಿ ಕೋರ್ಟ್‌ನಲ್ಲಿ ನಿಂತು, ನನ್ನಗಂಡ ಸರಿಯಿಲ್ಲ ಅವನು ಮೋಸ ಮಾಡ್ತಿದ್ದಾನೆ ಅಂತ ಹೇಳಬೇಕಲ್ಲ ಅಂತ ನೆನೆದು ಅಪಾರ ಸಂಕಟವಾಯ್ತು. ಅದೇ ಸಮಯಕ್ಕೆ ಕೋರ್ಟ್ ಬಳಿ ಬಂದ ತಿಮ್ಮೇಗೌಡ ಹೆಂಡತಿಯನ್ನು ತೀಕ್ಷ್ಣವಾಗಿ ದಿಟ್ಟಿಸಿದ. ಶಾರದಮ್ಮ ಗಂಡನ ದೃಷ್ಟಿ ಎದುರಿಸಲಾಗದೆ ತತ್ತರಿಸಿ ನಿಂತಲ್ಲೇ ಕುಸಿದು ಬೀಳುವಂತಾಗಿ ಪಕ್ಕದಲ್ಲೇ ನಿಂತಿದ್ದ ಮಗಳನ್ನು ಬಲವಾಗಿ ಹಿಡಿದುಕೊಂಡರು. ಅಪ್ಪನ ಉರಿಗಣ್ಣಿಗೆ ಅಮ್ಮ ಹೆದರಿದ್ದಾಳೆ ಎಂಬುದನ್ನು ಅರಿತು ಶೋಭಾ ತನ್ನ ತೋಳು ಹಿಡಿದು ಭುಜಕ್ಕೊರಗಿದ್ದ ಅಮ್ಮನ ಹಸ್ತವನ್ನು ಗಟ್ಟಿಯಾಗಿ ಹಿಡಕೊಂಡು, ಯಾಕಮ್ಮ ಹೆದರತೀಯ ತಪ್ಪುಮಾಡಿರೋದು ಆ ಮನುಷ್ಯ. ನೀನಲ್ಲ. ಧೈರ್ಯವಾಗಿರು ಅಂದಳು. ಅಷ್ಟರಲ್ಲಿ ಪ್ರಕಾಶ ಅಲ್ಲಿಗೆ ಬಂದವನು ನಡೀರಿ ಜಡ್ಜ್ ಬಂದ್ರು, ಅತ್ತೆ ನಮ್ಮ ಲಾಯರ್ ನಿಮ್ಮನ್ನ ಮಾವ ಮನೇಲಿ ಮಲಗ್ತಿದ್ರ ಅಂತ ಕೇಳ್ತಾರೆ, ನೀವು ಇಲ್ಲ ಅಂತೇಳಿ ಸಾಕು ಅಂದ. ಶಾರದಮ್ಮ ಏನೂ ಹೇಳದೆ ಮಗಳ ಕೈ ಹಿಡಿದುಕೊಂಡು ಕೋರ್ಟ್ ಹಾಲ್‌ನ ಒಳಗೆ ಹೋದರು. ಕಟಕಟೆಯಲ್ಲಿ ನಿಂತ ಶಾರದಮ್ಮನಿಗೆ ವಕೀಲರು ನಿಮ್ಮ ಪತಿ ತಿಮ್ಮೇಗೌಡ ಲೈಂಗಿಕ ಕ್ರಿಯೆ ನಡೆಸಲು ಅಸಮರ್ಥರು, ಅವರು ಲೈಂಗಿಕವಾಗಿ ನಿಶ್ಯಕ್ತರು? ಹೌದೇ? ಎಂದು ಕೇಳಿದಾಗ, ಲೈಂಗಿಕ ಅನ್ನೋ ಪದವನ್ನ ಈ ಮೊದಲು ಎಂದೂ ಕೇಳಿರದ ಶಾರದಮ್ಮ ವಕೀಲರು ಏನು ಕೇಳಿದರು ನಾನು ಏನು ಹೇಳಬೇಕು ಎಂದು ತಿಳಿಯದೆ ಗೊಂದಲಕ್ಕೆ ಬಿದ್ದರು. ಶಾರದಮ್ಮ ಸುಮ್ಮನೇ ನಿಂತಿರುವುದನ್ನ ಕಂಡು ಜಡ್ಜ್ ಸಂಕೋಚದಿಂದ ಮಾತಾಡುತ್ತಿಲ್ಲ ಎಂದು ಭಾವಿಸಿ, ವಕೀಲರು ಕೇಳೋ ಪ್ರಶ್ನೆಗೆ ಉತ್ತರ ಕೊಡಿ ಸಂಕೋಚ ಪಡಬೇಡಿ ಅಂದ್ರು. ಶಾರದಮ್ಮ ಏನು ಉತ್ತರ ಕೊಡೋದು ಗೊತ್ತಿಲ್ಲದೆ, ಅಷ್ಟರಲ್ಲಿ ಅಳಿಯ ಹೇಳಿದ್ದು ನೆನಪಾಗಿ ಅವರು ಮನೇಲಿ ಮಲಗ್ತಿರಲಿಲ್ಲ ಸ್ವಾಮಿ ಎಂದರು. ಎದುರು ಕಟಕಟೆಯಲ್ಲಿ ನಿಂತಿದ್ದ ತಿಮ್ಮೇಗೌಡ, ಹೌದು ಸ್ವಾಮಿ ನಾನು ಇವಳ ಜೊತೆ ಮಲಗ್ತಿರಲಿಲ್ಲ. ಇವಳ ಹೊಟ್ಟೇಲಿ ಹುಟ್ಟಿರೋ ಮಗಳು ನನ್ನ ಮಗಳಲ್ಲ. ನಾನು ಇವಳ ಜೊತೆ ಮಲಗ್ತಿರಲಿಲ್ಲ ಅಂತಲೇ, ಇವಳು ಅಲ್ಲಿ ನಿಂತವನಲ್ಲ ಅಳಿಯ ಅವನ ಜೊತೆ ಮಲಗತಿದ್ಲು ಸ್ವಾಮಿ, ಅಂತ ಕೋರ್ಟ್ ಹಾಲ್‌ನಲ್ಲಿ ನಿಂತಿದ್ದ ಪ್ರಕಾಶನ ಕಡೆ ಕೈ ತೋರಿಸಿದ. ಶಾರದಮ್ಮನಿಗೆ ಗಂಡನ ಬಾಯಿಂದ ಬಂದ ಮಾತು ಕೇಳಿ ತಲೆ ಮೇಲೆ ಸಿಡಿಲು ಹೊಡೆದಂಗಾಯ್ತು. ಶಾರದಮ್ಮ ನಿಂತಲ್ಲೇ ಕುಸಿದು ಬಿದ್ದರು.

ಪಾಪುರ್ ಬಡ್ಡಿಮಗ. ಕೊನೆಗೆ ಹೆಂಡ್ತೀನೆ ತಿಂದಕಂಡನಲ್ಲ. ಅಂಥ ಗರತಿಗೆ ಇಂಥ ಸ್ಥಿತಿ ಬಂತಲ್ಲ ಸಿವನೆ, ನಿನಗೆ ಕಣ್ಣು ಇದ್ದದ ಅಂಥ ಶಾಪ ಹಾಕ್ತಾ ಶಾರದಮ್ಮನ ಗೆಳತಿಯೊಬ್ಬಳು ಗೋಳೋ ಅಂಥ ಅಳ್ತಿದ್ಲು. ಗರತಿಯಾಗಿದ್ದಕ್ಕೆ ಕಣವ್ವ ಗಂಡ ಅನ್ನೋ ಮನೆಯಾಳ ಅಂಥ ಮಾತಾಡಿದ್ದಕ್ಕೆ ಜೀವ ಕಳಕೊಂಡುಬಿಟ್ಲು, ಈಗೇನಿದ್ರೂ ಹಾದರಗಿತ್ತೀರಿಗೆ ಕಾಲ ಅಂತ ಜೊತೆಗಿದ್ದ ಇನ್ನೊಬ್ಬ ಮುದುಕಿ ಅಳ್ತಾ ಮೂಗೊರೆಸಿಕೊಂಡ್ಲು. ಮತ್ತೊಂದು ಕಡೆ ಮುದುಕನೊಬ್ಬ ಅವನು ಗಂಡಸು ಕಣರಯ್ಯ ಆಳೋ ತಾಕತ್ತಿದೆ; ಇಬ್ಬರಲ್ಲ ಮೂರು ಹೆಂಡ್ತೀರನ ಬೇಕಿದ್ರೂ ಆಳ್ತಾನೆ. ಈ ಯಮ್ಮ ಹೊಂದುಕೊಂಡು ಹೋಗೋದು ಬಿಟ್ಟು ಮಗಳು ಅಳಿಯನ ಜೊತೆ ಸೇರಿ ಕೇಸ್ ಹಾಕಿದ್ದು ಸರಿಯಲ್ಲ. ಅದೂ ಅಲ್ಲದೆ ಈಯಮ್ಮ ಗಂಡ ನನ್ನ ಜೊತೆ ಮಲಗಲ್ಲ ಅಂತ ಎಲ್ಲರ ಮುಂದೆ ಹೇಳ್ತಂತಲ್ಲ; ಈ ವಯಸ್ಸಿನಲ್ಲಿ ಹೇಳೋ ಮಾತ ಅದು. ಅದನ್ನ ಕೇಳಿದ್ರೆ ಯಾವ ಗಂಡಸಿಗೆ ತಾನೇ ಸಿಟ್ಟು ಬರಲ್ಲ, ಸಿಟ್ಟಲ್ಲಿ ಏನೋ ಅಂದವನೆ. ಆ ಮಾತಿಗೆ ಈ ಯಮ್ಮ ಜೀವ ಕಳಕಂಡಿದ್ದು ಮಾತ್ರ ಅನ್ಯಾಯ ಅಂತ ತನ್ನ ಸುತ್ತಾ ನಿಂತವರಿಗೆ ಹೇಳ್ತಾ ಇದ್ದ. ಕೆಲವರು ಅವನ ಮಾತಿಗೆ ಒಪ್ಪಿಗೆಯನ್ನು, ಇನ್ನೂ ಕೆಲವರು